## ಕರ್ನಾಟಕ ವಿಧಾನಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಎಂ. ನಾರಾಯಣಸ್ವಾಮಿ ಇವರು ನಿಯಮ 72 ರಡಿ ಮಂಡಿಸಿರುವ ಸೂಚನೆಗೆ ಸರ್ಕಾರದ ಹೇಳಿಕೆ

**ಸೂಚನೆ:-**

ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರ ವಿಧಾನಸಭಾ ಕ್ಷೇತ್ರ, ವಾರ್ಡ್ ಸಂ:53ನೇ ವ್ಯಾಪ್ತಿಯ ಬಸವನಪುರ ಗ್ರಾಮದ ಸ.ನಂ.26/1 ರಲ್ಲಿ 4-00 ಎಕರೆ ವಿಸ್ತೀರ್ಣದ ಜಮೀನಿಗೆ ಖಾತೆ ನೀಡದಂತೆ ತಕರಾರು ಇದ್ದು, ಮಾನ್ಯ ನೊಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು ಇವರ ಆದೇಶದಂತೆ, ಸದರಿ ಜಮೀನಿನ ವಿಚಾರವಾಗಿ ಕೆ.ಆರ್.ಪುರಂ, ಪೋಲಿಸ್ ಠಾಣೆಯಲ್ಲಿ ಎಫ್.ಐ.ಆರ್(0623/2019) ಕೂಡ ದಾಖಲಾಗಿದ್ದು, ಮಾನ್ಯ ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಪ್ರಕರಣವಿದ್ದು, ದಾವೆ ಸಂ:ಆರ್.ಎ/ಬಿ.ಇ/44/2018 ದಿನಾಂಕ:12.02.2018 ರಂದು ತಡೆಯಾಜ್ಞೆ ನೀಡಿದ್ದು, ಮಾನ್ಯ ಭೂ ಕಬಳಿಕೆ ವಿಶೇಷ ನ್ಯಾಯಾಲಯದಲ್ಲಿಯೂ ಪ್ರಕರಣ ಸಂ:ಎಲ್.ಜಿ.ಸಿ/1243/2017 ರಂತೆ ಸಹ ದಾವೆ ಇರುತ್ತದೆ. ಸದರಿ ಜಮೀನಿಗೆ ಸಂಬಂಧಿಸಿದಂತೆ ಆದರೂ ಸಹ, ಮಾನ್ಯ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆಯವರು ಭೂಪರಿವರ್ತನೆ ಆದೇಶ ಸಂ:ಎ.ಎಲ್.ಎನ್(ಕೆ.ಆರ್.ಹೆಚ್)ಎಸ್.ಆರ್:18/2017-18 ರಂತೆ ದಿನಾಂಕ:19.02.2020 ರಂದು ಕಾನೂನನ್ನು ಮೀರಿ ಆದೇಶವನ್ನು ಹೊರಡಿಸಿರುತ್ತಾರೆ. ಅವರ ಆದೇಶದಂತೆ, ಮಾನ್ಯ ಜಂಟಿ ಆಯುಕ್ತರು ಹಾಗೂ ಮಹದೇವಪುರ ವಲಯದಲ್ಲಿರುವ ಕಂದಾಯ ಅಧಿಕಾರಿಗಳು ಸರ್ಕಾರಿ ಜಮೀನನ್ನು ಪರಿಶೀಲನೆ ಮಾಡದೇ ಅನಗತ್ಯವಾಗಿ ಖಾತೆ ಮಾಡಿರುವ ಬಗ್ಗೆ, ಮಾನ್ಯ ಕಂದಾಯ ಸಚಿವರ ಗಮನ ಸೆಳೆಯ ಬಯಸುತ್ತೇನೆ.

**ಹೇಳಿಕೆ:-**

ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರ ಹೋಬಳಿ, ಬಸವನಪುರ ಗ್ರಾಮದ ಸ.ನಂ.26/1 ರಲ್ಲಿನ 4-00 ಎಕರೆ ಜಮೀನಿಗೆ ವ್ಯವಸಾಯೇತರ ವಾಸದ ಉದ್ದೇಶಕ್ಕೆ ಭೂಪರಿವರ್ತನೆ ಕೋರಿ ದಿನಾಂಕ:27.07.2017 ರಂದು ಅರ್ಜಿ ಸಲ್ಲಿಸಿದ್ದ ವಿಷಯಕ್ಕೆ ಸಂಬಂಧಿಸಿದಂತೆ ತಹಶೀಲ್ದಾರ್, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು ರವರು, ಪತ್ರ ಸಂ:ಎಎಲ್ಎನ್(ಕೆ.ಆರ್.ಪುರ)ಸಿಆರ್:03/2017-18 ದಿನಾಂಕ:16.05.2019 ರ ಮೂಲಕ ಸಲ್ಲಿಸಿರುವ ವರದಿಯಲ್ಲಿ, ಸದರಿ ಜಮೀನನ್ನು ವ್ಯವಸಾಯೇತರ ವಾಸದ ಉದ್ದೇಶಕ್ಕೆ ಭೂಪರಿವರ್ತನೆ ಮಾಡಲು ಶಿಫಾರಸ್ಸು ಮಾಡಿರುತ್ತಾರೆ.

ಏತನ್ಮಧ್ಯೆ, ಸದರಿ ಜಮೀನಿನ ಮೇಲೆ ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ದಾಖಲಾಗಿದ್ದ ಪ್ರಕರಣ ಸಂ:ಆರ್ಎ/ಬಿಇ/44/2018 ರ ಪ್ರಕರಣದಲ್ಲಿ ದಿನಾಂಕ:12.02.2018 ರಂದು ಹೊರಡಿಸಿರುವ ಆದೇಶದಲ್ಲಿ ತಡೆಯಾಜ್ಞೆ ನೀಡಿರುವುದರಿಂದ ಹಾಗೂ ಕರ್ನಾಟಕ ಭೂ ಕಬಳಿಕೆ ನ್ಯಾಯಾಲಯದಲ್ಲಿ ದಾಖಲಾಗಿರುವ ಪ್ರಕರಣ ಸಂ:ಎಲ್ಜಿಸಿ/1243/2017 ರ ಪ್ರಕರಣವು ಪ್ರಗತಿಯಲ್ಲಿರುವುದರಿಂದ, ಸದರಿ ಜಮೀನನ್ನು ಭೂಪರಿವರ್ತನೆ ಮಾಡದಂತೆ ದೂರುದಾರರಾದ ಶ್ರೀ.ವೇಲು ಬಿನ್ ಆರ್ಮುಗಂ ಇವರು ದಿನಾಂಕ:20.04.2019 ಮತ್ತು ದಿನಾಂಕ:06.09.2019 ರಂದು ಜಿಲ್ಲಾಧಿಕಾರಿಗಳ ಕಚೇರಿಗೆ ತಕರಾರು ಸಲ್ಲಿಸಿರುತ್ತಾರೆ. ಆದರೆ, ದೂರುದಾರರು ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದಲ್ಲಿ ದಾಖಲಾಗಿರುವ ಪ್ರಕರಣದ ಬಗ್ಗೆ ಯಾವುದೇ ದಾಖಲೆಗಳನ್ನು ತಮ್ಮ ದೂರಿನೊಂದಿಗೆ ಲಗತ್ತಿಸಿರುವುದಿಲ್ಲ.

ಮುಂದುವರೆದು. ಶ್ರೀ.ಆರ್.ಚಂದ್ರು. ಶ್ರೀಮತಿ.ರುಕ್ಮಿಣಿ. ಶ್ರೀ.ಎಂ.ರಾಮಮೂರ್ತಿ. ಶ್ರೀ.ಆರ್.ನವೀನ್ ಮತ್ತು ಶ್ರೀ.ಆರ್.ನಿರಂಜನ ರವರನ್ನು ಪ್ರತಿವಾದಿಗಳನ್ನಾಗಿಸಿ ಶ್ರೀ.ಎ.ಪೇಲು. ರವರು ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದಲ್ಲಿ ದಾಖಲಿಸಿದ್ದ ಪ್ರಕರಣ ಸಂ:ಎಲ್.ಜಿ.ಸಿ/631/2019 ರ ಪ್ರಕರಣವನ್ನು ವಿಚಾರಣೆ ನಡೆಸಿ. ಮಾನ್ಯ ನ್ಯಾಯಾಲಯವು ದಿನಾಂಕ:05.07.2019 ರಂದು ಸದರಿ ಪ್ರಕರಣವನ್ನು ವಜಾಗೊಳಿಸಿ ಆದೇಶಿಸಿರುತ್ತದೆ.

ದಿನಾಂಕ:06.09.2019 ರಂದು ದೂರುದಾರರು ಭೂಪರಿವರ್ತನೆ ಮಾಡದಂತೆ ಆಕ್ಷೇಪಣೆ ವ್ಯಕ್ತಪಡಿಸಿ ಸಲ್ಲಿಸಿದ್ದ ತಕರಾರಿಗೆ ಸಂಬಂಧಿಸಿದಂತೆ. ಯಾವುದೇ ನ್ಯಾಯಾಲಯಗಳಲ್ಲಿ ಪ್ರಶ್ನಿತ ಜಮೀನಿಗೆ ಸಂಬಂಧಿಸಿದಂತೆ. ಪ್ರಕರಣಗಳು ಬಾಕಿ ಇದ್ದಲ್ಲಿ ಅಂತಹ ಪ್ರಕರಣಗಳಿಗೆ ನ್ಯಾಯಾಲಯವು ಹೊರಡಿಸುವ ಅಂತಿಮ ಆದೇಶಕ್ಕೆ ಒಳಪಟ್ಟು ಭೂಪರಿವರ್ತನೆ ಮಾಡಲು ಸೂಕ್ತ ಕ್ರಮ ಕೈಗೊಳ್ಳಬಹುದಾಗಿರುತ್ತದೆಂದು ಜಿಲ್ಲಾಧಿಕಾರಿಗಳ ಕಛೇರಿಯ ಕಾನೂನು ಸಮಾಲೋಚಕರು ನೀಡಿದ್ದ ಕಾನೂನಾತ್ಮಕ ಅಭಿಪ್ರಾಯದಂತೆ ಸದರಿ ಜಮೀನನ್ನು ವಾಸದ ಉದ್ದೇಶಕ್ಕೆ ದಿನಾಂಕ:19.02.2020 ರಂದು ಭೂಪರಿವರ್ತನೆ ಆದೇಶ ಹೊರಡಿಸಲಾಗಿರುತ್ತದೆ.

ತಹಶೀಲ್ದಾರ್, ಬೆಂಗಳೂರು ಪೂರ್ವ ತಾಲ್ಲೂಕು, ಶ್ರೀಮತಿ.ರುಕ್ಮಿಣಿ. ಶ್ರೀ.ಎಂ.ರಾಮಮೂರ್ತಿ ಮತ್ತು ಶ್ರೀ.ಆರ್.ಚಂದ್ರ ರವರನ್ನು ಪ್ರತಿವಾದಿಗಳನ್ನಾಗಿಸಿ ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಶ್ರೀಮತಿ.ನಾರಾಯಣಮ್ಮ ಕೋಂ ಲೇ॥ಹನುಮಂತಪ್ಪ ರವರು ದಾಖಲಿಸಿದ್ದ ಮೇಲ್ಮನವಿ ಪ್ರಕರಣ ಸಂ:ಆರ್ಎ/ಬಿಇ/44/2018 ರ ಪ್ರಕರಣವನ್ನು ವಿಚಾರಣೆ ನಡೆಸಿ ದಿನಾಂಕ:16.06.2020 ರಂದು ಉಪವಿಭಾಗಾಧಿಕಾರಿಗಳು ಮೇಲ್ಮನವಿದಾರರ ಮನವಿಯನ್ನು ವಜಾಗೊಳಿಸಿ ಆದೇಶ ಹೊರಡಿಸಿರುತ್ತಾರೆ.

ಸದರಿ ಜಮೀನಿನ ನೊಂದಣಿಗೆ ಸಂಬಂಧಿಸಿದಂತೆ ವಿತರಿಸಿರುವ 11ಇ ನಕ್ಷೆಯ ಬಗ್ಗೆ ಸಬ್‌ರಿಜಿಸ್ಟ್ರಾರ್ ಮತ್ತು ಸರ್ವೆಯರ್‌ಗಳ ವಿರುದ್ಧ ಕೆ.ಆರ್.ಪುರಂ. ಪೋಲೀಸ್ ಠಾಣೆಯಲ್ಲಿ ದಾಖಲಿಸಲಾಗಿದ್ದ ಎಫ್.ಐ.ಆರ್(0623/2019) ರ ಪ್ರಕರಣದಲ್ಲಿ ಠಾಣಾಧಿಕಾರಿಗಳು ತನಿಖೆ ಮಾಡಿ. ತನಿಖಾ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಅಂತಿಮ ಚಾರ್ಜ್‌ಶೀಟ್ ಸಲ್ಲಿಸಿದ್ದು. ಮಾನ್ಯ ನ್ಯಾಯಾಲಯದಲ್ಲಿ ಪ್ರಕರಣವು ವಿಚಾರಣೆ ಹಂತದಲ್ಲಿರುತ್ತದೆ.

(ಆರ್‌ಡಿ 26 ಎಲ್‌ಜಿಕ್ಯೂ 2021)

(ಆರ್. ಅಶೋಕ)
ಕಂದಾಯ ಸಚಿವರು